# ನಿಮ್ಮ ಶಾಸಕರು ಐದು ವರ್ಷ ಮಾಡಿದ್ದೇನು?

ವಿಜಯ ಕರ್ನಾಟಕ ಪ್ರಸ್ತುತಪಡಿಸುವ

# MLA REPORT CARD

ದಕ್ಷ್-ಎಡಿಆರ್ ಸರ್ವೆ

# ಅವರ ಸಾಧನೆಯ ಕೈಗನ್ನಡಿ

## ಕೃಷ್ಣರಾಜ | ಎಸ್.ಎ.ರಾಮದಾಸ್

ಬಿಜೆಪಿ, ಮೈಸೂರು



ಪ್ರಸಕ್ತ ಬಿಜೆಪಿ ಸರಕಾರದ ಅವಧಿಯಲ್ಲಿ ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿಯಾಗಿ ಹಾಗೂ ನಂತರ ವೈದ್ಯಕೀಯ ಶಿಕ್ಷಣ ಸಚಿವರಾಗಿ ಕೆಲಸ ಮಾಡಿದವರು.

**6.1 / 10**

**ಸಾಧನೆ ಸ್ಕೋರ್**

| | |
|---|---|
| ಉತ್ತಮ ರಸ್ತೆ | 7.91 |
| ಕಾನೂನು ಸುವ್ಯವಸ್ಥೆ | 8.13 |
| ಸಾರ್ವಜನಿಕ ಸಾರಿಗೆ | 7.17 |
| ಆಸ್ಪತ್ರೆ | 5.79 |
| ಶಾಲೆ | 3.36 |
| ಕುಡಿಯುವ ನೀರು | 6.6 |

**ಮತದಾರರ ಉತ್ತರ**

| ಮತ ಹಾಕುವಾಗ ಜಾತಿ ಮುಖ್ಯವೆನಿಸಿತ್ತಾ? | ಗೆದ್ದ ಮೇಲೆ ಶಾಸಕರು ಬೇಕೆಂದಾಗ ಸಿಕ್ತಾರಾ? | ಎಷ್ಟು ನಂಬಿಕೆ ಉಳಿಸಿ ಕೊಂಡಿದ್ದಾರೆ? |
|---|---|---|
| ಹೌದು 43% | 5.7/10 | 7.2/10 |

**ಶಾಸಕರ ನಿಧಿ ಏನಾಯ್ತು?**

ಬಿಡುಗಡೆಯಾದ ಹಣ 3.94 ಕೋಟಿ

ಖರ್ಚಾದ ಹಣ: 2.4 ಕೋಟಿ; ಉಳಿದ ಹಣ: 1.54 ಕೋಟಿ

2008ರ ಚುನಾವಣೆ ವೇಳೆ ಘೋಷಿಸಿದ ಆಸ್ತಿ: 9.25 ಕೋಟಿ

ವಿಧಾನಸಭೆಗೆ ಹಾಜರಾತಿ: ★ / 140 ದಿನ

ವಿಧಾನಸಭೆಯಲ್ಲಿ ಕೇಳಿದ ಪ್ರಶ್ನೆ: ಸಚಿವ

"ಕ್ಷೇತ್ರದಲ್ಲಿ ನಿಧಿಯನ್ನು ಅತಿ ಹೆಚ್ಚು ಬಳಕೆ ಮಾಡಿದ್ದೇನೆ. ಶಾಲೆ, ಸಮುದಾಯಭವನದ ಜತೆ ಜತೆಯಲ್ಲೇ ಅತಿ ಹೆಚ್ಚು ಹಣವನ್ನು ಉದ್ಯಾನಗಳ ಅಭಿವೃದ್ಧಿಗೆ ನೀಡಿದ್ದೇನೆ.

**-ಎಸ್.ಎ.ರಾಮದಾಸ್**, ಸಚಿವರು

"ಶೇ.25ರಷ್ಟು ಅನುದಾನವನ್ನು ಇವರು ಬಳಕೆ ಮಾಡದಿರುವುದು ಅಂಕಿ ಅಂಶಗಳಿಂದ ತಿಳಿದು ಬರುತ್ತದೆ. ಚುನಾವಣೆ ಕಾರಣಕ್ಕೆ ಈಗ ಬಾಕಿ ಹಣವನ್ನೆಲ್ಲಾ ಬಳಸುವ ಪ್ರಯತ್ನ ಮಾಡುತ್ತಿರುವುದು ಸರಿಯಲ್ಲ.

**-ಎಂ.ಕೆ.ಸೋಮಶೇಖರ್**. ಕಳೆದ ಬಾರಿ ಸೋತ ಕಾಂಗ್ರೆಸ್ ಅಭ್ಯರ್ಥಿ

## ಚಾಮರಾಜ | ಎಚ್.ಎಸ್.ಶಂಕರಲಿಂಗೇಗೌಡ

ಬಿಜೆಪಿ, ಮೈಸೂರು ಜಿಲ್ಲೆ



ನಾಲ್ಕು ಬಾರಿ ಶಾಸಕರಾಗಿರುವ ಶಂಕರಲಿಂಗೇಗೌಡ ಅವರು ಆಡಳಿತ ಪಕ್ಷದಲ್ಲೇ ವಿರೋಧಿ ನಾಯಕನಂತೆ ಕಾಣಿಸಿಕೊಳ್ಳುತ್ತಿದ್ದರು. ತಮ್ಮ ಸಾಂಪ್ರದಾಯಿಕ ಚಾಮರಾಜ ಕ್ಷೇತ್ರದ ಅಭಿವೃದ್ಧಿಗೆ ಅವರು ಈ ಸಲ ನೀಡಿರುವ ಕೊಡುಗೆ ಬಗ್ಗೆ ನಿರಾಶದಾಯಕ ಉತ್ತರವೇ ಸಿಗುತ್ತದೆ.

**5.3 / 10**

**ಸಾಧನೆ ಸ್ಕೋರ್**

| | |
|---|---|
| ಉತ್ತಮ ರಸ್ತೆ | 7.19 |
| ಕಾನೂನು ಸುವ್ಯವಸ್ಥೆ | 4.42 |
| ಸಾರ್ವಜನಿಕ ಸಾರಿಗೆ | 5.23 |
| ಆಸ್ಪತ್ರೆ | 5.28 |

**ಮತದಾರರ ಉತ್ತರ**

| ಮತ ಹಾಕುವಾಗ ಜಾತಿ ಮುಖ್ಯವೆನಿಸಿತ್ತಾ? | ಗೆದ್ದ ಮೇಲೆ ಶಾಸಕರು ಬೇಕೆಂದಾಗ ಸಿಕ್ತಾರಾ? | ಎಷ್ಟು ನಂಬಿಕೆ ಉಳಿಸಿ ಕೊಂಡಿದ್ದಾರೆ? |
|---|---|---|
| ಅತಿ ಮುಖ್ಯ 52% | 7.2/10 | 7.7/10 |

**ಶಾಸಕರ ನಿಧಿ ಏನಾಯ್ತು?**

ಬಿಡುಗಡೆಯಾದ ಹಣ 3.94 ಕೋಟಿ

ಖರ್ಚಾದ ಹಣ: 2.88 ಕೋಟಿ; ಉಳಿದ ಹಣ: 1.06 ಲಕ್ಷ

2008ರ ಚುನಾವಣೆ ವೇಳೆ ಘೋಷಿಸಿದ ಆಸ್ತಿ: 1.82 ಕೋಟಿ

ವಿಧಾನಸಭೆಗೆ ಹಾಜರಾತಿ: 109★ / 140 ದಿನ

ವಿಧಾನಸಭೆಯಲ್ಲಿ ಕೇಳಿದ ಪ್ರಶ್ನೆ: 31

"ಈ ಅವಧಿಯಲ್ಲಿ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯನ್ನು ಹೆಚ್ಚು ಬಳಕೆ ಮಾಡಿದ್ದೇನೆ. ಜನರ ಕೆಲಸಕ್ಕೆ ಹೆಚ್ಚು ವಿನಿಯೋಗ ಮಾಡಿರುವ ಖುಷಿಯಿದೆ. ನನ್ನದೇ ಸಂಸ್ಥೆಗಳಿಗೆ ಅನುದಾನವನ್ನು ನೀಡಿಲ್ಲ..

**-ಎಚ್.ಎಸ್.ಶಂಕರಲಿಂಗೇಗೌಡ**, ಶಾಸಕ

"ಮೂರ್‍ನಾಲ್ಕು ದಶಕದ ಹಿಂದೆ ರೂಪಿಸಿದ ಪ್ರಮುಖ ಕಟ್ಟಡಗಳೇ ಈಗಲೂ ಇವೆ. ಆನಂತರ ಅಂಥ ಪ್ರಮುಖ ಕಟ್ಟಡ, ಮೂಲ ಸೌಕರ್ಯ ಒದಗಿಸಿಲ್ಲ. ಶಾಶ್ವತವಾಗಿ ಉಳಿಯುವಂಥ ಕೆಲಸ ಆಗಬೇಕಾಗಿತ್ತು.

**-ವಾಸು**, ಕಳೆದ ಬಾರಿ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ

## ಮಡಿಕೇರಿ | ಅಪ್ಪಚ್ಚು ರಂಜನ್

ಬಿಜೆಪಿ, ಕೊಡಗು ಜಿಲ್ಲೆ



ಇದುವರೆಗೂ ಮೂರು ಬಾರಿ ವಿಧಾನಸಭೆಗೆ ಆಯ್ಕೆಯಾಗಿರುವ ಅಪ್ಪಚ್ಚು ರಂಜನ್ ಆಡಳಿತ ಪಕ್ಷ ಬಿಜೆಪಿಯ ಪ್ರಭಾವಿ ಶಾಸಕರಲ್ಲಿ ಒಬ್ಬರು. ಈಗ ಕ್ರೀಡಾ ಮತ್ತು ಯುವಜನ ಸೇವಾ ಇಲಾಖೆ ಸಚಿವರಾಗಿಯೂ ಕೆಲಸ ಮಾಡುತ್ತಿದ್ದಾರೆ.

**4 / 10**

**ಸಾಧನೆ ಸ್ಕೋರ್**

| | |
|---|---|
| ಉತ್ತಮ ರಸ್ತೆ | 2.76 |
| ಕಾನೂನು ಸುವ್ಯವಸ್ಥೆ | 3.06 |
| ಸಾರ್ವಜನಿಕ ಸಾರಿಗೆ | 2.52 |
| ಆಸ್ಪತ್ರೆ | 4.5 |
| ಶಾಲೆ | 5.71 |
| ಕುಡಿಯುವ ನೀರು | 3.34 |

**ಮತದಾರರ ಉತ್ತರ**

| ಮತ ಹಾಕುವಾಗ ಜಾತಿ ಮುಖ್ಯವೆನಿಸಿತ್ತಾ? | ಗೆದ್ದ ಮೇಲೆ ಶಾಸಕರು ಬೇಕೆಂದಾಗ ಸಿಕ್ತಾರಾ? | ಎಷ್ಟು ನಂಬಿಕೆ ಉಳಿಸಿ ಕೊಂಡಿದ್ದಾರೆ? |
|---|---|---|
| ಮುಖ್ಯವಲ್ಲ 75% | 6.5/10 | 5.6/10 |

**ಶಾಸಕರ ನಿಧಿ ಏನಾಯ್ತು?**

ಬಿಡುಗಡೆಯಾದ ಹಣ 4.18 ಕೋಟಿ

ಖರ್ಚಾದ ಹಣ: 2.89 ಕೋಟಿ; ಉಳಿದ ಹಣ: 1.29 ಕೋಟಿ

2008ರ ಚುನಾವಣೆ ವೇಳೆ ಘೋಷಿಸಿದ ಆಸ್ತಿ: 18.20 ಲಕ್ಷ

ವಿಧಾನಸಭೆಗೆ ಹಾಜರಾತಿ: 123 / 140 ದಿನ

ವಿಧಾನಸಭೆಯಲ್ಲಿ ಕೇಳಿದ ಪ್ರಶ್ನೆ: 22

"ಶಾಸಕರ ನಿಧಿಯನ್ನು ಸಮರ್ಥವಾಗಿ ಬಳಸಲಾಗಿದೆ. ಸಮುದಾಯ ಭವನ, ಕಾಲನಿ, ಬುಡಕಟ್ಟು ಜನರ ಹಾಡಿಗಳಿಗೆ ನಿಧಿ ಮೂಲಕ ಅನುದಾನ ಕಲ್ಪಿಸಲಾಗಿದೆ. ನನಗೆ ತೃಪ್ತಿ ಇದೆ..

**-ಅಪ್ಪಚ್ಚು ರಂಜನ್**, ಶಾಸಕರು

"ಶಾಶ್ವತ ಯೋಜನೆ ಕಾಣುತ್ತಿಲ್ಲ. ಬಹುತೇಕ ಕಳಪೆ ಕಾಮಗಾರಿಯಾಗಿರುವ ಬಗ್ಗೆ ನಾಗರಿಕರೇ ದೂರಿಕೊಂಡಿದ್ದಾರೆ. ಬಹುತೇಕ ಕೆಲಸಗಳನ್ನು ಬಿಜೆಪಿ ಕಾರ್ಯಕರ್ತರಿಗೆ ಗುತ್ತಿಗೆ ನೀಡಲಾಗಿದೆ.

**-ಬಿ.ಎ.ಜೀವಿಜಯ**, ಕಳೆದ ಬಾರಿ ಸೋತ ಅಭ್ಯರ್ಥಿ

## ನರಸಿಂಹರಾಜ | ತನ್ವೀರ್ ಸೇಠ್

ಕಾಂಗ್ರೆಸ್, ಮೈಸೂರು ಜಿಲ್ಲೆ



ಕಾಂಗ್ರೆಸ್‌ನ ಹಿರಿಯ ನಾಯಕರಾಗಿದ್ದ ಅಜೀಜ್ ಸೇಠ್ ಪುತ್ರ ತನ್ವೀರ್ ಸೇಠ್ 2002ರಿಂದ ಮೂರು ಬಾರಿ ಗೆದ್ದು ಹ್ಯಾಟ್ರಿಕ್ ಬಾರಿಸಿದ್ದಾರೆ. ಹಿಂದೆ ಕಾಂಗ್ರೆಸ್ ಸರ್ಕಾರದಲ್ಲಿ ಕಾರ್ಮಿಕ ಖಾತೆ ಸಚಿವರಾಗಿದ್ದರು.

**5.4 / 10**

**ಸಾಧನೆ ಸ್ಕೋರ್**

| | |
|---|---|
| ಉತ್ತಮ ರಸ್ತೆ | 5.7 |
| ಕಾನೂನು ಸುವ್ಯವಸ್ಥೆ | 2.6 |
| ಸಾರ್ವಜನಿಕ ಸಾರಿಗೆ | 5.7 |
| ಆಸ್ಪತ್ರೆ | 5.08 |

**ಮತದಾರರ ಉತ್ತರ**

| ಮತ ಹಾಕುವಾಗ ಜಾತಿ ಮುಖ್ಯವೆನಿಸಿತ್ತಾ? | ಗೆದ್ದ ಮೇಲೆ ಶಾಸಕರು ಬೇಕೆಂದಾಗ ಸಿಕ್ತಾರಾ? | ಎಷ್ಟು ನಂಬಿಕೆ ಉಳಿಸಿ ಕೊಂಡಿದ್ದಾರೆ? |
|---|---|---|
| ಅತಿ ಮುಖ್ಯ 30% | 7.1/10 | 7.6/10 |

**ಶಾಸಕರ ನಿಧಿ ಏನಾಯ್ತು?**

ಬಿಡುಗಡೆಯಾದ ಹಣ 3.94 ಕೋಟಿ

ಖರ್ಚಾದ ಹಣ: 2.60 ಕೋಟಿ; ಉಳಿದ ಹಣ: 1.34 ಕೋಟಿ

2008ರ ಚುನಾವಣೆ ವೇಳೆ ಘೋಷಿಸಿದ ಆಸ್ತಿ: 3.69 ಕೋಟಿ

ವಿಧಾನಸಭೆಗೆ ಹಾಜರಾತಿ: 126 / 140 ದಿನ

ವಿಧಾನಸಭೆಯಲ್ಲಿ ಕೇಳಿದ ಪ್ರಶ್ನೆ: 75

"ಶಾಸಕರ ನಿಧಿ ಮೂಲಕ ಶಾಲಾ ಕಟ್ಟಡ, ಸಮುದಾಯ ಭವನ, ಆಟೊರಿಕ್ಷಾ ನಿಲ್ದಾಣ ನಿರ್ಮಿಸಿದ್ದೇನೆ. ಪೂರ್ಣ ಕ್ರಿಯಾಯೋಜನೆ ನೀಡಿದ್ದರೂ ಅನುಷ್ಠಾನಗೊಂಡಿರುವುದು ವಿಳಂಬವಾಗಿದೆ.

**-ತನ್ವೀರ್‌ಸೇಠ್**, ಶಾಸಕ

"ಕೆಲವೇ ಪ್ರದೇಶಗಳಿಗೆ ಸೀಮಿತವಾಗಿ ಅನುದಾನವನ್ನು ಶಾಸಕರು ಬಳಸಿಕೊಂಡಿರುವುದು ಕಂಡು ಬರುತ್ತದೆ. ಅದರಲ್ಲೂ ಚುನಾವಣೆ ಉದ್ದೇಶದಿಂದಲೇ ಅನುದಾನ ಹಂಚಿಕೆ ಮಾಡಿದ್ದಾರೆ.

**-ಬಿ.ಪಿ.ಮಂಜುನಾಥ್**. ಬಿಜೆಪಿ ಪರಾಜಿತ ಅಭ್ಯರ್ಥಿ.

## ಮೈಸೂರು ಲೋಕಸಭಾ ಕ್ಷೇತ್ರ

# ಯಾರು ಹೆಚ್ಚು ನಂಬಿಕಸ್ಥರು?

ಮೈಸೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಅತಿ ಹೆಚ್ಚು ಸುದ್ದಿ ಮಾಡಿದವರು ಹಲವರು. ವಿಧಾನಸಭೆ ಅಧ್ಯಕ್ಷ ಕೆ.ಜಿ. ಬೋಪಯ್ಯ (ವೀರಾಜಪೇಟೆ) ಸಾಕಷ್ಟು ವಿವಾದಗಳ ಕಾರಣಕ್ಕಾಗಿಯೂ ಸುದ್ದಿ ಮಾಡಿದ್ದರು. ಹಾಗೆಯೇ ಸಚಿವ ರಾಮದಾಸ್ ಸಹ ಸದಾ ಸುದ್ದಿಯಲ್ಲಿದ್ದರು. ಇನ್ನು ಆಡಳಿತ ಪಕ್ಷದಲ್ಲಿದ್ದುಕೊಂಡೇ ವಿರೋಧಿ ಪಕ್ಷದ ಸದಸ್ಯನಂತೆ ವರ್ತಿಸುತ್ತಾ ಮಾಧ್ಯಮಗಳಿಗೆ ಆಹಾರವಾಗುತ್ತಿದ್ದವರು ಎಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ). ಈ ವಿಚಾರದಲ್ಲಿ ರ್‍ಯಾಂಕಿಂಗ್ ಕೊಡುವುದಾದರೆ ಶಂಕರಲಿಂಗೇಗೌಡರೇ ಮುಂದಿರುತ್ತಾರೆ.

ಆದರೆ ಗೌಡರ ಸಾಧನೆ ಅಷ್ಟೊಂದು ಸಮಾಧಾನಕರವಾಗಿಲ್ಲ ಎಂದು ಆ ಕ್ಷೇತ್ರದ ಜನರು ವಿಜಯ ಕರ್ನಾಟಕ ಪ್ರಸ್ತುತಪಡಿಸುವ ದಕ್ಷ್-ಎಡಿಆರ್ ಸಮೀಕ್ಷೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಆದರೂ ಮತದಾರರು ಇವರನ್ನು ಅತ್ಯಂತ ನಂಬಿಗಸ್ಥ ಜನಪ್ರತಿನಿಧಿ ಎಂದು ಬಣ್ಣಿಸಿರುವುದು ಇವರ ಹೆಗ್ಗಳಿಕೆ. ಇಡೀ ಮೈಸೂರು ಕ್ಷೇತ್ರಗಳಲ್ಲೇ ಗೌಡರು ಅತ್ಯಂತ ನಂಬಿಗಸ್ಥ ವ್ಯಕ್ತಿಯಾಗಿ ಹೊರಹೊಮ್ಮಿದ್ದಾರೆ. ಇವರ ನಂತರದ ಸ್ಥಾನ ಸ್ಪೀಕರ್ ಕೆ.ಜಿ. ಬೋಪಯ್ಯ ಅವರದು. ಬೋಪಯ್ಯ ಒಟ್ಟಾರೆ ಸ್ಕೋರ್‌ನಲ್ಲೂ ಗರಿಷ್ಠ ಅಂಕಗಳನ್ನು ಪಡೆದುಕೊಂಡಿದ್ದಾರೆ. ಅತ್ಯಧಿಕ 10ರಲ್ಲಿ 7. ವಿಶೇಷವೆಂದರೆ, ಸ್ಪೀಕರ್ ಆಗಿದ್ದರೂ ತಮಗೆ ಬೇಕೆಂದಾಗ ಸುಲಭವಾಗಿ ಲಭ್ಯರಾಗುತ್ತಿದ್ದರು ಎಂದು ವೀರಾಜಪೇಟೆ ಕ್ಷೇತ್ರದ ಮತದಾರರು ಅಭಿಪ್ರಾಯಪಟ್ಟಿದ್ದಾರೆ.

ಆದರೆ ಡಿಸೆಂಬರ್ ಅಂತ್ಯದವರೆಗೆ ವಿಜಯ ಕರ್ನಾಟಕಕ್ಕೆ ಸಿಕ್ಕ ಮಾಹಿತಿಗಳ ಪ್ರಕಾರ, ಬೋಪಯ್ಯ ಅವರ ಕ್ಷೇತ್ರದಲ್ಲಿ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿ ಬಳಕೆ ಬಹಳ ಕಡಿಮೆ ಇದೆ. ಒಟ್ಟು 3.61 ಕೋಟಿ ರೂ ಬಿಡುಗಡೆಯಾಗಿದ್ದರೆ, ವೆಚ್ಚವಾಗಿದ್ದು 1.38 ಕೋಟಿ ಮಾತ್ರ. ಆದರೆ ಇವರ ಕ್ಷೇತ್ರದಲ್ಲಿ ರಸ್ತೆಗಳ ಸ್ಥಿತಿ ಮಾತ್ರ ಉತ್ತಮವಾಗಿದೆ ಎನ್ನುವುದು ಸ್ಥಳೀಯರ ಅಭಿಪ್ರಾಯ. ಅದರಲ್ಲೂ ಕ್ರೀಡಾ ಮತ್ತು ಯುವಜನ ಸೇವಾ ಖಾತೆ ಸಚಿವ ಅಪ್ಪಚ್ಚು ರಂಜನ್ ಅವರ ಒಟ್ಟಾರೆ ಸಾಧನೆ ಬಗ್ಗೆ ಅವರ ಕ್ಷೇತ್ರ ಮಡಿಕೇರಿ ಮತದಾರರು ತೃಪ್ತಿ ವ್ಯಕ್ತಪಡಿಸಿಲ್ಲ. ಆದರೆ ರಂಜನ್ ಹೆಗ್ಗಳಿಕೆ ಎಂದರೆ ಅಭ್ಯರ್ಥಿಯ ಜಾತಿ ನೋಡಿ ವೋಟ್ ಹಾಕಿಲ್ಲ ಎಂದು ಮತದಾರರು ಹೇಳಿರುವುದು. ಅವರ ನೆರೆಯ ಕ್ಷೇತ್ರ ವೀರಾಜಪೇಟೆ ಮತದಾರರೂ ಶಾಸಕರ ಜಾತಿ ನೋಡಿ ಮತ ಹಾಕಿಲ್ಲ ಎಂದಿದ್ದಾರೆ. ಶಾಸಕರ ವಿಶ್ವಾಸಾರ್ಹತೆ ಪ್ರಶ್ನೆ ಎದುರಾದಾಗ ಹುಣಸೂರಿನ ಎಚ್.ಪಿ.ಮಂಜುನಾಥ್ ಅವರಿಗೆ ಮಾತ್ರ ಅತ್ಯಧಿಕ ಅಂಕಗಳು ಸಿಕ್ಕಿವೆ.

**ಮೈಸೂರು ಜಿಲ್ಲೆಯ ಉಳಿದ ಶಾಸಕರ ಸ್ಕೋರ್**

- **ಹುಣಸೂರು** ಎಚ್.ಪಿ.ಮಂಜುನಾಥ್ (ಕಾಂಗ್ರೆಸ್): ಸ್ಕೋರ್ 6.6/10
- **ಚಾಮುಂಡೇಶ್ವರಿ** ಎಂ.ಸತ್ಯನಾರಾಯಣ (ಕಾಂಗ್ರೆಸ್) ಸ್ಕೋರ್: 4.8/10
- **ಪಿರಿಯಾಪಟ್ಟಣ** ಕೆ.ವೆಂಕಟೇಶ್ (ಕಾಂಗ್ರೆಸ್) ಸ್ಕೋರ್: 5/10

## ಸಾಗರ | ಗೋಪಾಲಕೃಷ್ಣ ಬೇಳೂರು

ಬಿಜೆಪಿ, ಶಿವಮೊಗ್ಗ ಜಿಲ್ಲೆ



ಬಂಗಾರಪ್ಪ ಅವರ ಬೆಂಬಲಿಗರಾಗಿದ್ದ ಬೇಳೂರು ಗೋಪಾಲಕೃಷ್ಣ ಬಿಜೆಪಿ ಸೇರಿ ಶಾಸಕರಾಗಿ ಆಯ್ಕೆಯಾದರು. ಈ ಐದು ವರ್ಷಗಳ ಅವಧಿಯಲ್ಲಿ ವಿವಿಧ ಕಾರಣಗಳಿಗಾಗಿ ಸುದ್ದಿಯಲ್ಲಿದ್ದರು.

**5.7 / 10**

**ಸಾಧನೆ ಸ್ಕೋರ್**

| | |
|---|---|
| ಉತ್ತಮ ರಸ್ತೆ | 5.07 |
| ಕಾನೂನು ಸುವ್ಯವಸ್ಥೆ | 8.38 |
| ಸಾರ್ವಜನಿಕ ಸಾರಿಗೆ | 4.87 |
| ಆಸ್ಪತ್ರೆ | 7.15 |
| ಶಾಲೆ | 6.26 |
| ಕುಡಿಯುವ ನೀರು | 4.72 |

**ಮತದಾರರ ಉತ್ತರ**

| ಮತ ಹಾಕುವಾಗ ಜಾತಿ ಮುಖ್ಯವೆನಿಸಿತ್ತಾ? | ಗೆದ್ದ ಮೇಲೆ ಶಾಸಕರು ಬೇಕೆಂದಾಗ ಸಿಕ್ತಾರಾ? | ಎಷ್ಟು ನಂಬಿಕೆ ಉಳಿಸಿ ಕೊಂಡಿದ್ದಾರೆ? |
|---|---|---|
| ಮುಖ್ಯವಲ್ಲ 82% | 8.5/10 | 8.9/10 |

**ಶಾಸಕರ ನಿಧಿ ಏನಾಯ್ತು?**

ಬಿಡುಗಡೆಯಾದ ಹಣ 4.18 ಕೋಟಿ

ಖರ್ಚಾದ ಹಣ: 2.38 ಕೋಟಿ; ಉಳಿದ ಹಣ: 1.8 ಕೋಟಿ

2008ರ ಚುನಾವಣೆ ವೇಳೆ ಘೋಷಿಸಿದ ಆಸ್ತಿ: 40 ಲಕ್ಷ

ವಿಧಾನಸಭೆಗೆ ಹಾಜರಾತಿ: 97 / 140 ದಿನ

ವಿಧಾನಸಭೆಯಲ್ಲಿ ಕೇಳಿದ ಪ್ರಶ್ನೆ: 50

"ತುರ್ತು ಅಗತ್ಯವಾದ ಕುಡಿಯುವ ನೀರು ಯೋಜನೆಗೆ ಆದ್ಯತೆ ನೀಡಿ ಅನುದಾನ ಒದಗಿಸಿದ್ದೇನೆ. ಪೈಪ್‌ಲೈನ್ ಅಳವಡಿಕೆ, ರಸ್ತೆ ದುರಸ್ತಿ, ಚರಂಡಿ ನಿರ್ಮಾಣಕ್ಕೆ ಅನುದಾನ ನೀಡಿದ್ದೇನೆ.

**-ಗೋಪಾಲಕೃಷ್ಣ ಬೇಳೂರು**, ಶಾಸಕ

"ಕ್ಷೇತ್ರದಲ್ಲಿ ಬಗರ್ ಹುಕುಂ, ಅರಣ್ಯ ಭೂಮಿ ಸಾಗುವಳಿ ಸಮಸ್ಯೆಗಳನ್ನು ಜೀವಂತವಾಗಿ ಉಳಿಸಿದ್ದಾರೆ. ಆಶ್ರಯ ನಿವೇಶನಗಳನ್ನು ಹಂಚಿಕೆ ಮಾಡಲಿಲ್ಲ, ಮನೆಗಳಿಗೆ ಹಕ್ಕು ಪತ್ರ ವಿತರಿಸುವಲ್ಲಿ ವಿಫಲರಾಗಿದ್ದಾರೆ.

**-ಕಾಗೋಡು ತಿಮ್ಮಪ್ಪ**, ಪರಾಜಿತ ಅಭ್ಯರ್ಥಿ

## ಸೊರಬ | ಹರತಾಳು ಹಾಲಪ್ಪ

ಕೆಜೆಪಿ, ಶಿವಮೊಗ್ಗ ಜಿಲ್ಲೆ



1967ರ ಬಳಿಕ ಬಂಗಾರಪ್ಪ ಮತ್ತು ಅವರ ಪುತ್ರ ಕುಮಾರ್ ಬಂಗಾರಪ್ಪ ಬಳಿಕ ಸೊರಬ ಕ್ಷೇತ್ರವನ್ನು ಪ್ರತಿನಿಧಿಸಿದವರು ಎಚ್.ಹಾಲಪ್ಪ. ಯಡಿಯೂರಪ್ಪ ಸಂಪುಟದಲ್ಲಿ ಸಚಿವರಾಗಿದ್ದ ಇವರು ಅತ್ಯಾಚಾರ ಆರೋಪದ ಹಿನ್ನೆಲೆಯಲ್ಲಿ ಅಧಿಕಾರ ತ್ಯಜಿಸಿದರು.

**5.2 / 10**

**ಸಾಧನೆ ಸ್ಕೋರ್**

| | |
|---|---|
| ಉತ್ತಮ ರಸ್ತೆ | 4.74 |
| ಕಾನೂನು ಸುವ್ಯವಸ್ಥೆ | 4.55 |
| ಸಾರ್ವಜನಿಕ ಸಾರಿಗೆ | 5.53 |
| ಆಸ್ಪತ್ರೆ | 4.4 |
| ಶಾಲೆ | 4.29 |
| ಕುಡಿಯುವ ನೀರು | 2.13 |

**ಮತದಾರರ ಉತ್ತರ**

| ಮತ ಹಾಕುವಾಗ ಜಾತಿ ಮುಖ್ಯವೆನಿಸಿತ್ತಾ? | ಗೆದ್ದ ಮೇಲೆ ಶಾಸಕರು ಬೇಕೆಂದಾಗ ಸಿಕ್ತಾರಾ? | ಎಷ್ಟು ನಂಬಿಕೆ ಉಳಿಸಿ ಕೊಂಡಿದ್ದಾರೆ? |
|---|---|---|
| ಅತಿ ಮುಖ್ಯ 33% | 5.1/10 | 7/10 |

**ಶಾಸಕರ ನಿಧಿ ಏನಾಯ್ತು?**

ಬಿಡುಗಡೆಯಾದ ಹಣ 4.18 ಕೋಟಿ

ಖರ್ಚಾದ ಹಣ: 2.34 ಕೋಟಿ; ಉಳಿದ ಹಣ: 1.84 ಕೋಟಿ

2008ರ ಚುನಾವಣೆ ವೇಳೆ ಘೋಷಿಸಿದ ಆಸ್ತಿ: 1 ಕೋಟಿ

ವಿಧಾನಸಭೆಗೆ ಹಾಜರಾತಿ: ★ / 140 ದಿನ

ವಿಧಾನಸಭೆಯಲ್ಲಿ ಕೇಳಿದ ಪ್ರಶ್ನೆ: 25

"ಹಳ್ಳಿಗಳಿಗೆ ರಸ್ತೆ ನಿರ್ಮಿಸುವ ಮೂಲಕ ಸಂಪರ್ಕ ಕಲ್ಪಿಸಲಾಗಿದೆ. ಐದು ಕಡೆ ಆಸ್ಪತ್ರೆಗಳಿಗೆ ಹೊಸ ಕಟ್ಟಡ ನಿರ್ಮಿಸಲಾಗಿದೆ. ಬಸವ ವಸತಿ ಯೋಜನೆ ಅಡಿ 8 ಸಾವಿರ ಮನೆ ಹಂಚಿಕೆ ಮಾಡಲಾಗಿದೆ.

**-ಹರತಾಳು ಹಾಲಪ್ಪ**, ಮಾಜಿ ಶಾಸಕ

"ದಂಡಾವತಿ ಯೋಜನೆ ಹೆಸರಲ್ಲಿ ರಾಜಕೀಯ ಮಾಡಿದ್ದು ಬಿಟ್ಟರೆ ಬೇರಾವ ಕೆಲಸಗಳಾಗಲಿಲ್ಲ. ಕನಿಷ್ಠ ಪರ್ಯಾಯ ಸಣ್ಣ ನೀರಾವರಿ ಯೋಜನೆಯನ್ನಾದರೂ ಕೈಗೊಳ್ಳಬಹುದಿತ್ತು. ಹೊಸ ಯೋಜನೆಗಳಿಗೆ ಹಣ ತರಲಿಲ್ಲ.

**-ಕುಮಾರ್ ಬಂಗಾರಪ್ಪ**, ಪರಾಜಿತ ಅಭ್ಯರ್ಥಿ

## ಶಿವಮೊಗ್ಗ ಲೋಕಸಭಾ ಕ್ಷೇತ್ರ

# ಜಾತಿ ನೋಡಿ ಮತ ಹಾಕಲ್ಲ

ಕಳೆದ ಐದು ವರ್ಷಗಳಲ್ಲಿ ಸದಾ ರಾಜಕೀಯ ಚಟುವಟಿಕೆಗಳ ಕೇಂದ್ರತಾಣವಾಗಿದ್ದು ಶಿವಮೊಗ್ಗ. ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ, ಈಗ ಉಪ ಮುಖ್ಯಮಂತ್ರಿಯಾಗಿರುವ ಕೆ.ಎಸ್.ಈಶ್ವರಪ್ಪ, ಒಂದಿಲ್ಲೊಂದು ರಾಜಕೀಯ ತಲ್ಲಣಗಳಿಗೆ ಕಾರಣವಾದ ಹರತಾಳು ಹಾಲಪ್ಪ, ಬೇಳೂರು ಗೋಪಾಲಕೃಷ್ಣ ಇದೇ ಜಿಲ್ಲೆಯವರು. ಹಾಗಾಗಿ ಶಿವಮೊಗ್ಗ ಜಿಲ್ಲೆ ಸದಾ ಸಕ್ರಿಯ ಜಿಲ್ಲೆ.

ತಮ್ಮ ಕ್ಷೇತ್ರವನ್ನು ಯಾರು ಹೆಚ್ಚು ಅಭಿವೃದ್ಧಿ ಮಾಡಿದ್ದಾರೆ ಎಂಬ ಪ್ರಶ್ನೆಯನ್ನು ಆಯಾ ಕ್ಷೇತ್ರಗಳ ಮತದಾರರ ಮುಂದಿಟ್ಟರೆ ಹಲವು ಬಗೆ ಬಗೆಯ ಉತ್ತರ ಸಿಕ್ಕಿದವು. ಅದರಲ್ಲೂ ಬಿ.ಎಸ್.ಯಡಿಯೂರಪ್ಪ ಅವರ ಸಾಧನೆ ಬಗ್ಗೆ ಶಿಕಾರಿಪುರದ ಜನ ಮತ್ತು ಕೆ.ಲಕ್ಷ್ಮೀನಾರಾಯಣ್ ಬಗ್ಗೆ ಬೈಂದೂರಿನ ಜನ ತೃಪ್ತಿದಾಯಕ ಎಂಬ ಉತ್ತರ ಕೊಟ್ಟಿದ್ದಾರೆ.

ವಿಶೇಷವೆಂದರೆ ಇವರಿಬ್ಬರೂ ಜನಕ್ಕೆ ಬೇಗ ಲಭ್ಯರಾಗುತ್ತಾರೆ ಎಂಬ ಅಭಿಪ್ರಾಯವನ್ನು ಪಡಕೊಂಡಿದ್ದಾರೆ. ಶಾಸಕರು ನಿಮಗೆ ಸಂಪರ್ಕಕ್ಕೆ ಸಿಗುತ್ತಾರೆಯೇ ಎಂಬ ಪ್ರಶ್ನೆಗೆ ಸಾಗರದ ವಿಧಾನಸಭಾ ಕ್ಷೇತ್ರದ ಮತದಾರರು ಬೇಳೂರು ಗೋಪಾಲಕೃಷ್ಣ ಅವರ ಪರವಾಗಿ ಅಭಿಪ್ರಾಯ ನೀಡಿರುವುದು ಅಚ್ಚರಿಯ ಸಂಗತಿ.

ನೀವು ಜಾತಿ ನೋಡಿ ಮತ ಹಾಕಿದ್ದೀರೇ ಎನ್ನುವ ಪ್ರಶ್ನೆಯೊಂದನ್ನು ಜನರಲ್ಲಿ ಕೇಳಲಾಯಿತು. ಇದಕ್ಕೆ ಸಿಕ್ಕ ಉತ್ತರ ಕೂಡ ಕುತೂಹಲಕಾರಿಯಾಗಿದೆ. ಜಾತಿಯನ್ನು ಪರಿಗಣಿಸಿಲ್ಲ ಎಂದು ಶಿವಮೊಗ್ಗ ಗ್ರಾಮಾಂತರ ಕ್ಷೇತ್ರ ಹಾಗೂ ಭದ್ರಾವತಿ ಕ್ಷೇತ್ರದ ಗರಿಷ್ಠ ಮತದಾರರು ಉತ್ತರ ಕೊಟ್ಟಿದ್ದಾರೆ. ಈ ಅಂಕಿ ಕ್ರಮವಾಗಿ ಶೇ 98 ಮತ್ತು 88ರಷ್ಟಿದೆ. ಮತ ಚಲಾಯಿಸುವಾಗ ಜಾತಿ ಮುಖ್ಯವಾಗಿಲ್ಲ ಎಂದು ಈಶ್ವರಪ್ಪ ಅವರ ಕ್ಷೇತ್ರವಾದ ಶಿವಮೊಗ್ಗದ ಜನ ಸಹ ಅಭಿಪ್ರಾಯಪಟ್ಟಿದ್ದಾರೆ.

ಈ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಡಿಯೂರಪ್ಪ ಮತ್ತು ಈಶ್ವರಪ್ಪ ಅವರನ್ನು ಹೊರತುಪಡಿಸಿದರೆ ಉಳಿದ ಶಾಸಕರಲ್ಲಿ ವಿಧಾನಸಭಾ ಅಧಿವೇಶನಕ್ಕೆ ಹಾಜರಾದವರಲ್ಲಿ ಗರಿಷ್ಠ ದಿನಗಳು ಹಾಜರಾದವರು ಕಾಂಗ್ರೆಸ್‌ನ ಕಿಮ್ಮನೆ ರತ್ನಾಕರ. 132 ದಿನ ಹಾಜರಾಗಿದ್ದು 146 ಪ್ರಶ್ನೆಗಳನ್ನು ಕೇಳುವ ಮೂಲಕ ವಿಧಾನಮಂಡಲ ಕಲಾಪಗಳಲ್ಲಿ ಸಕ್ರಿಯರಾಗಿದ್ದಾರೆ.

**ಕ್ಷೇತ್ರವಾರು ಪೂರ್ಣ ಮಾಹಿತಿಗೆ: www.vijaykarnataka.com ನೋಡಿ.**

★ 2012ರ ಮಾರ್ಚ್ ತನಕದ ಶಾಸಕರ ಹಾಜರಾತಿ. ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು ಹಾಗೂ ಸಚಿವರ ಹಾಜರಾತಿ ದಾಖಲಾಗುವುದಿಲ್ಲ.

ಗ್ರಾಫಿಕ್: **ಸುರೇಶ್ ಎನ್.** ಪುಟ ನಿರ್ವಹಣೆ: **ಬಿ.ಕೆ.ಗಣೇಶ್**,
ಪೂರಕ ಮಾಹಿತಿ: **ಕುಂದೂರು ಉಮೇಶ ಭಟ್ಟ, ನಾಗರಾಜ ನೇರಿಗೆ, ಸಂತೋಷ್ ಕಾಚಿನಕಟ್ಟೆ**
ನೆರವು: **ಸಹ್ಯಾದ್ರಿ ನಾಗರಾಜ್, ಆರ್. ಹರಿಶಂಕರ್, ಡಿ.ಎನ್. ವಿಜೇತ್ ಕುಮಾರ್.**

DAKSH
Politics, Perceptions, Participation.

## ಶಿವಮೊಗ್ಗ ಗ್ರಾಮಾಂತರ | ಕೆ.ಜಿ.ಕುಮಾರಸ್ವಾಮಿ

ಬಿಜೆಪಿ



ಕ್ಷೇತ್ರ ಮರುವಿಂಗಡಣೆಯಲ್ಲಿ ಹೊಳೆಹೊನ್ನೂರು ಮೀಸಲು ಕ್ಷೇತ್ರ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ರೂಪುಗೊಂಡ ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿ ಮೊಟ್ಟ ಮೊದಲ ಶಾಸಕರಾಗಿ ಬಿಜೆಪಿಯ ಕೆ.ಜಿ.ಕುಮಾರಸ್ವಾಮಿ ಚುನಾಯಿತರಾಗಿ ಬಂದರು.

**5.4 / 10**

**ಸಾಧನೆ ಸ್ಕೋರ್**

| | |
|---|---|
| ಉತ್ತಮ ರಸ್ತೆ | 3.76 |
| ಕಾನೂನು ಸುವ್ಯವಸ್ಥೆ | 5.44 |
| ಸಾರ್ವಜನಿಕ ಸಾರಿಗೆ | 3.61 |
| ಆಸ್ಪತ್ರೆ | 6.13 |
| ಶಾಲೆ | 7.43 |
| ಕುಡಿಯುವ ನೀರು | 6.11 |

**ಮತದಾರರ ಉತ್ತರ**

| ಮತ ಹಾಕುವಾಗ ಜಾತಿ ಮುಖ್ಯವೆನಿಸಿತ್ತಾ? | ಗೆದ್ದ ಮೇಲೆ ಶಾಸಕರು ಬೇಕೆಂದಾಗ ಸಿಕ್ತಾರಾ? | ಎಷ್ಟು ನಂಬಿಕೆ ಉಳಿಸಿ ಕೊಂಡಿದ್ದಾರೆ? |
|---|---|---|
| ಮುಖ್ಯವಲ್ಲ 98% | 7.44/10 | 7.2/10 |

**ಶಾಸಕರ ನಿಧಿ ಏನಾಯ್ತು?**

ಬಿಡುಗಡೆಯಾದ ಹಣ 4.18 ಕೋಟಿ

ಖರ್ಚಾದ ಹಣ: 2.70 ಕೋಟಿ; ಉಳಿದ ಹಣ: 1.48 ಕೋಟಿ

2008ರ ಚುನಾವಣೆ ವೇಳೆ ಘೋಷಿಸಿದ ಆಸ್ತಿ: 1 ಕೋಟಿ

ವಿಧಾನಸಭೆಗೆ ಹಾಜರಾತಿ: 128★ / 140 ದಿನ

ವಿಧಾನಸಭೆಯಲ್ಲಿ ಕೇಳಿದ ಪ್ರಶ್ನೆ: 103

"ಕ್ಷೇತ್ರಕ್ಕೆ ಐದು ವರ್ಷ ಅವಧಿಯಲ್ಲಿ ಒಂದು ಸಾವಿರ ಕೋಟಿ ರೂ.ವೆಚ್ಚದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ರೈತರ ಬಹುದಿನಗಳ ಕನಸಾಗಿದ್ದ ತುಂಗಾ ಏತ ನಿರಾವರಿ ಯೋಜನೆ ನನಸಾಗಿದೆ.

**-ಕೆ.ಜಿ.ಕುಮಾರಸ್ವಾಮಿ**, ಶಾಸಕ

"ಕ್ಷೇತ್ರದಲ್ಲಿ ಸಂಚಾರವಿಲ್ಲ, ಜನರ ಬಳಿಗೆ ಹೋಗುವುದಿಲ್ಲ, ಅವರ ಕೈಗೆ ಸಿಗುವುದಿಲ್ಲ ಎಂದ ಮೇಲೆ ಶಾಸಕರ ನಿಧಿ ಖರ್ಚಾಗಿದ್ದಾದರೂ ಹೇಗೆ?

**-ಕರಿಯಣ್ಣ**,, ಪರಾಜಿತ ಅಭ್ಯರ್ಥಿ

## ತೀರ್ಥಹಳ್ಳಿ | ಕಿಮ್ಮನೆ ರತ್ನಾಕರ

ಕಾಂಗ್ರೆಸ್, ಶಿವಮೊಗ್ಗ ಜಿಲ್ಲೆ



ತೀರ್ಥಹಳ್ಳಿ, ಶಿವಮೊಗ್ಗ ಮತ್ತು ಹೊಸನಗರ ತಾಲೂಕು ವ್ಯಾಪ್ತಿಯನ್ನು ಒಳಗೊಂಡ ಅತ್ಯಂತ ದೊಡ್ಡ ಕ್ಷೇತ್ರ ತೀರ್ಥಹಳ್ಳಿ. ಕಳೆದ ಬಾರಿ ಬಿಜೆಪಿ ಅಲೆ ನಡುವೆಯೂ ಕಾಂಗ್ರೆಸ್‌ನ ಕಿಮ್ಮನೆ ರತ್ನಾಕರ್ ವಿಜಯಿಯಾಗಿದ್ದರು.

**5.5 / 10**

**ಸಾಧನೆ ಸ್ಕೋರ್**

| | |
|---|---|
| ಉತ್ತಮ ರಸ್ತೆ | 6.15 |
| ಕಾನೂನು ಸುವ್ಯವಸ್ಥೆ | 4.4 |
| ಸಾರ್ವಜನಿಕ ಸಾರಿಗೆ | 4.54 |
| ಆಸ್ಪತ್ರೆ | 6.12 |
| ಶಾಲೆ | 6.21 |
| ಕುಡಿಯುವ ನೀರು | 2.71 |

**ಮತದಾರರ ಉತ್ತರ**

| ಮತ ಹಾಕುವಾಗ ಜಾತಿ ಮುಖ್ಯವೆನಿಸಿತ್ತಾ? | ಗೆದ್ದ ಮೇಲೆ ಶಾಸಕರು ಬೇಕೆಂದಾಗ ಸಿಕ್ತಾರಾ? | ಎಷ್ಟು ನಂಬಿಕೆ ಉಳಿಸಿ ಕೊಂಡಿದ್ದಾರೆ? |
|---|---|---|
| ಮುಖ್ಯ 68% | 7.6/10 | 7.8/10 |

**ಶಾಸಕರ ನಿಧಿ ಏನಾಯ್ತು?**

ಬಿಡುಗಡೆಯಾದ ಹಣ 4.18 ಕೋಟಿ

ಖರ್ಚಾದ ಹಣ: 2.8 ಕೋಟಿ; ಉಳಿದ ಹಣ: 1.38 ಲಕ್ಷ

2008ರ ಚುನಾವಣೆ ವೇಳೆ ಘೋಷಿಸಿದ ಆಸ್ತಿ: 99 ಲಕ್ಷ

ವಿಧಾನಸಭೆಗೆ ಹಾಜರಾತಿ: 132 / 140 ದಿನ

ವಿಧಾನಸಭೆಯಲ್ಲಿ ಕೇಳಿದ ಪ್ರಶ್ನೆ: 146

"ಶಾಸಕರ ಕ್ಷೇತ್ರಾಭಿವೃದ್ಧಿಯಲ್ಲಿ ಅತಿಹೆಚ್ಚಿನ ಅನುದಾನವನ್ನು ಸಂಪರ್ಕ ರಸ್ತೆಗಳು, ಸೇತುವೆಗಳು, ಕಾಲು ಸೇತುವೆಗಳ ನಿರ್ಮಾಣಕ್ಕೆ ಒದಗಿಸಲಾಗಿದೆ. ಆದರೂ ಇದು ಸಾಲದಾಗಿದೆ.

**-ಕಿಮ್ಮನೆ ರತ್ನಾಕರ**, ಶಾಸಕ

"ಬಿಜೆಪಿ ಸರಕಾರದಿಂದ ಕ್ಷೇತ್ರಕ್ಕೆ 150 ಕೋಟಿ ರೂ.ಗಳಿಗಿಂತ ಹೆಚ್ಚು ಅನುದಾನ ಬಂದಿದೆ. ಆದರೆ, ಸರಿಯಾಗಿ ಬಳಕೆಯಾಗಿಲ್ಲ. ಬಂದ ಹಣ ಗುತ್ತಿಗೆದಾರರು ಮತ್ತು ಶಾಸಕರ ಕಾರ್ಯಕರ್ತರ ಪಾಲಾಗಿದೆ.

**-ಆರಗ ಜ್ಞಾನೇಂದ್ರ**, ಪರಾಜಿತ ಅಭ್ಯರ್ಥಿ

## ಭದ್ರಾವತಿ | ಬಿ.ಕೆ. ಸಂಗಮೇಶ್ವರ

ಕಾಂಗ್ರೆಸ್, ಶಿವಮೊಗ್ಗ ಜಿಲ್ಲೆ



ಶಾಸಕ ಬಿ.ಕೆ.ಸಂಗಮೇಶ್ವರ್ ಒಮ್ಮೆ ಪಕ್ಷೇತರರಾಗಿ ಮಗದೊಮ್ಮೆ ಕಾಂಗ್ರೆಸ್‌ನಿಂದ ಚುನಾಯಿತರಾಗಿದ್ದಾರೆ. ಒಂದು ಹಂತದಲ್ಲಿ ಬಿಜೆಪಿ ಸೇರುತ್ತಾರೆಂಬ ಮಾತುಗಳು ಕೇಳಿ ಬಂದಿದ್ದವು.

**6.7 / 10**

**ಸಾಧನೆ ಸ್ಕೋರ್**

| | |
|---|---|
| ಉತ್ತಮ ರಸ್ತೆ | 8.16 |
| ಕಾನೂನು ಸುವ್ಯವಸ್ಥೆ | 4.7 |
| ಸಾರ್ವಜನಿಕ ಸಾರಿಗೆ | 7.43 |
| ಆಸ್ಪತ್ರೆ | 8.92 |
| ಶಾಲೆ | 6.99 |
| ಕುಡಿಯುವ ನೀರು | 7.13 |

**ಮತದಾರರ ಉತ್ತರ**

| ಮತ ಹಾಕುವಾಗ ಜಾತಿ ಮುಖ್ಯವೆನಿಸಿತ್ತಾ? | ಗೆದ್ದ ಮೇಲೆ ಶಾಸಕರು ಬೇಕೆಂದಾಗ ಸಿಕ್ತಾರಾ? | ಎಷ್ಟು ನಂಬಿಕೆ ಉಳಿಸಿ ಕೊಂಡಿದ್ದಾರೆ? |
|---|---|---|
| ಅಲ್ಲ 88% | 9.6/10 | 6.7/10 |

**ಶಾಸಕರ ನಿಧಿ ಏನಾಯ್ತು?**

ಬಿಡುಗಡೆಯಾದ ಹಣ 4.18 ಕೋಟಿ

ಖರ್ಚಾದ ಹಣ: 3.11 ಕೋಟಿ; ಉಳಿದ ಹಣ: 1.07 ಕೋಟಿ

2008ರ ಚುನಾವಣೆ ವೇಳೆ ಘೋಷಿಸಿದ ಆಸ್ತಿ: 5 ಕೋಟಿ

ವಿಧಾನಸಭೆಗೆ ಹಾಜರಾತಿ: 100 / 140 ದಿನ

ವಿಧಾನಸಭೆಯಲ್ಲಿ ಕೇಳಿದ ಪ್ರಶ್ನೆ: 83

"ಕ್ಷೇತ್ರದಲ್ಲಿ ಅತಿಹೆಚ್ಚು ಅನುದಾನವನ್ನು ಪರಿಶಿಷ್ಟ ಮತ್ತು ಹಿಂದುಳಿದ ವರ್ಗದವರ ಸಮುದಾಯ ಭವನಗಳಿಗೆ ಬಿಡುಗಡೆ ಮಾಡಲಾಗಿದೆ.

**-ಸಂಗಮೇಶ್ವರ**, ಶಾಸಕ

"ಭದ್ರಾವತಿಯ ರಸ್ತೆಗಳು ಇಡೀ ಕ್ಷೇತ್ರದ ಅಭಿವೃದ್ಧಿಗೆ ಕನ್ನಡಿ. ಸರಕಾರದಿಂದ ಬಂದ ಅನುದಾನಗಳು ಸ್ವಂತ ಅಭಿವೃದ್ಧಿಗೆ ಮೀಸಲಾದವೇ ಹೊರತು ಸಾರ್ವಜನಿಕ ಉದ್ದೇಶಗಳಿಗೆ ಬಳಕೆಯಾಗಲಿಲ್ಲ.

**-ಎಂ.ಜೆ.ಅಪ್ಪಾಜಿ**, ಪರಾಜಿತ ಅಭ್ಯರ್ಥಿ

## ಬೈಂದೂರು | ಕೆ. ಲಕ್ಷ್ಮೀ ನಾರಾಯಣ

ಬಿಜೆಪಿ, ಉಡುಪಿ ಜಿಲ್ಲೆ



ಉದ್ಯಮಿ ಕೆ.ಲಕ್ಷ್ಮೀನಾರಾಯಣ ಮೂಲತಃ ಉದ್ಯಮಿ. ತಡವಾಗಿ ರಾಜಕೀಯ ಪ್ರವೇಶಿಸಿದ ಅವರು ಎರಡು ಸೋಲಿನ ನಂತರ 2008ರ ಸ್ಪರ್ಧೆಯಲ್ಲಿ ತೀರಾ ಕೊನೆಕ್ಷಣದಲ್ಲಿ ಗೆಲುವಿನ ನಗೆ ಬೀರಿದವರು. ಇತ್ತೀಚೆಗೆ ಕೆಜೆಪಿ ಪಾಳಯದಲ್ಲಿ ಗುರುತಿಸಿಕೊಂಡಿದ್ದಾರೆ.

**6.3 / 10**

**ಸಾಧನೆ ಸ್ಕೋರ್**

| | |
|---|---|
| ಉತ್ತಮ ರಸ್ತೆ | 3 |
| ಕಾನೂನು ಸುವ್ಯವಸ್ಥೆ | 6.07 |
| ಸಾರ್ವಜನಿಕ ಸಾರಿಗೆ | 6.58 |
| ಆಸ್ಪತ್ರೆ | 8.37 |
| ಶಾಲೆ | 7.36 |
| ಕುಡಿಯುವ ನೀರು | 5.91 |

**ಮತದಾರರ ಉತ್ತರ**

| ಮತ ಹಾಕುವಾಗ ಜಾತಿ ಮುಖ್ಯವೆನಿಸಿತ್ತಾ? | ಗೆದ್ದ ಮೇಲೆ ಶಾಸಕರು ಬೇಕೆಂದಾಗ ಸಿಕ್ತಾರಾ? | ಎಷ್ಟು ನಂಬಿಕೆ ಉಳಿಸಿ ಕೊಂಡಿದ್ದಾರೆ? |
|---|---|---|
| ಮುಖ್ಯ 55% | 8.4/10 | 7.8/10 |

**ಶಾಸಕರ ನಿಧಿ ಏನಾಯ್ತು?**

ಬಿಡುಗಡೆಯಾದ ಹಣ 4.44 ಕೋಟಿ

ಖರ್ಚಾದ ಹಣ: 2.79 ಕೋಟಿ; ಉಳಿದ ಹಣ: 1.65 ಕೋಟಿ

2008ರ ಚುನಾವಣೆ ವೇಳೆ ಘೋಷಿಸಿದ ಆಸ್ತಿ: 9 ಕೋಟಿ

ವಿಧಾನಸಭೆಗೆ ಹಾಜರಾತಿ: 118 / 140 ದಿನ

ವಿಧಾನಸಭೆಯಲ್ಲಿ ಕೇಳಿದ ಪ್ರಶ್ನೆ: 00

"ನನ್ನ ಅವಧಿಯಲ್ಲಿ ನಡೆದ ಎಲ್ಲಾ ಕಾಮಗಾರಿ ಗರಿಷ್ಠ ಗುಣಮಟ್ಟ ಹೊಂದಿವೆ. ಎಲ್ಲಾ ಕಾಮಗಾರಿಗಿಂತಲೂ ಕನ್ನಡ ಕುದ್ರುವಿಗೆ ಸೇತುವೆ ನಿರ್ಮಿಸಿದ್ದೇನೆ.

**-ಕೆ. ಲಕ್ಷ್ಮೀನಾರಾಯಣ**, ಶಾಸಕರು,

"ಶಾಸಕರು ಕೇವಲ ಆಶ್ವಾಸನೆ ನೀಡುವುದರಲ್ಲಿಯೇ ಕಾಲ ಕಳೆಯುತ್ತಿದ್ದು, ಒಂದೆರಡು ಕಾಮಗಾರಿ ಬಿಟ್ಟು, ಯಾವ ಕಾಮಗಾರಿ ಸಂಪೂರ್ಣಗೊಳ್ಳಲಿಲ್ಲ, ಬೈಂದೂರು ತಾಲೂಕು ರಚನೆಗಾಗಿ ಪ್ರಯತ್ನಿಸಲೇ ಇಲ್ಲ.

**-ಗೋಪಾಲ ಪೂಜಾರಿ**, ಪರಾಜಿತ ಕಾಂಗ್ರೆಸ್ ಅಭ್ಯರ್ಥಿ